ಎಸ್.ಸಿ.ಸಂಖ್ಯೆ: 308/2021
ಪ್ರಾಸಾ.-3

<u>ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ</u>

<u>ಎಸ್.ಸಿ. ಸಂಖ್ಯೆ: 308/2021</u>

ಚಾ.ಸಾ.- 5 ಪ್ರಾಸಾ.- 3

ದಿಃ 13.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ರಮೇಶ್ |
| ತಂದೆ ಹೆಸರು | ನಾಗೇಂದ್ರ |
| ವಯಸ್ಸು | 27 ವರ್ಷ |
| ವೃತ್ತಿ | ಬಿ.ಬಿ.ಎಂ.ಪಿ ನೌಕರ |
| ವಿಳಾಸ | ಗೋರಿಪಾಳ್ಯ, ಬೆಂಗಳೂರು |

<u>ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ</u>

ಚಾ.ಸಾ-1 ರವರು ನನ್ನ ಅಕ್ಕನ ಗಂಡ. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳ ಪರಿಚಯ ಇಲ್ಲ. ಆರೋಪಿಗಳು ಚಾ.ಸಾ-1 ರವರ ಜೊತೆ ಜಗಳ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಸದರಿ ವಿಚಾರವಾಗಿ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಮುಖ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯ ಹೇಳಿಕೆ ಹಾಗು ಕಡತದಲ್ಲಿನ ದಾಖಲೆಗಳನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.)

<u>ಪಾಟಿಸವಾಲುಃ ಮಾನ್ಯ ಅಭಿಯೋಜಕರಿಂದಃ</u>

2. ದಿಃ 31.8.2020 ರಂದು ಸಂಜೆ ಸುಮಾರು 7 ಗಂಟೆಗೆ ನಾನು ಮತ್ತು ಚಾ.ಸಾ-4 ರವರು ವಿ.ಎಸ್. ಗಾರ್ಡನ್ ಬಳಿ ನಿಂತಿದ್ದಾಗ ಆರೋಪಿಗಳು ಚಾ.ಸಾ-1

ರವರ ಜೊತೆ ಅವರ ಹಣ ಕೊಟ್ಟಿಲ್ಲ ಎಂದು ಜಗಳ ತೆಗೆದು ಚಾ.ಸಾ-1 ರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅದೇ ದಿನ ರಾತ್ರಿ ಸುಮಾರು 8 ಗಂಟೆಗೆ ನಾನು ಮತ್ತು ಚಾ.ಸಾ-4 ರವರು ಮಾತೃಶ್ರೀ ಬಾರ್ ಮುಂದೆ ಹೋಗುತ್ತಿದ್ದಾಗ ಗಲ್ಲಿಯಲ್ಲಿ ನಿಂತಿದ್ದ 1 ಮತ್ತು 2 ನೇ ಆರೋಪಿಗಳು ಚಾ.ಸಾ-1 ರವರ ಬಳಿ ಬಂದು 2 ನೇ ಆರೋಪಿಯು ಚಾ.ಸಾ-1 ರವರ ಮುಖಕ್ಕೆ ಖಾರದ ಪುಡಿ ಎರಚಿದಾಗ 1 ನೇ ಆರೋಪಿಯು ಮೀನು ಕತ್ತರಿಸುವ ಚಾಪರ್ ನಿಂದ ಚಾ.ಸಾ-1 ರವರ ತಲೆ ಮತ್ತು ಎಡಕಿವಿಯ ಬಳಿ ಹೊಡೆದು ಆತನನ್ನು ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 1.9.2020 ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಹೇಳಿಕೆಯಲ್ಲಿ 'ನಾನು ದಿನಾಂಕ .. .. .. .. ... ಓಡಿಹೋಗಿರುತ್ತಾರೆ' ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಭಾಗದ ಹೇಳಿಕೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು.

3. ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದ ಕೃತ್ಯದ ಬಗ್ಗೆ ಮಾಹಿತಿ ಇದ್ದರೂ ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗಳ ಪರ ವಕೀಲರು ತಮ್ಮ ಪರ ಪಾಟೀಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.